# ದೇವಯಾನಿಯ ದೆವ್ವ!

ಕಚ–ದೇವಯಾನಿಯ ಕಥೆ ಯಾರಿಗೆ ಕೊತ್ತಿಲ್ಲ? ಆದರೆ ಈ ದೇವಯಾನಿ ಕಚನಿಗಾಗಿ ಹಂಬಲಿಸುವ ಪ್ರೇಮಿಯಲ್ಲ. ಹೆಣ್ಣುಮಕ್ಕಳಿಗೆ ತೊಂದರೆ ಕೊಡುವವರನ್ನು ಅಟ್ಟಾಡಿಸಿಕೊಂಡು ಕಾಡುವ ಹುಡುಗಿ ಈ ದೇವಯಾನಿ. ಇದ್ಯಾವುದು ಹೊಸ ಪುರಾಣ ಎಂದುಕೊಳ್ಳಬೇಡಿ. ಪುರಾಣ ಕಥೆಯೂ ಅಲ್ಲ, ಆ್ಯಕ್ಷನ್ ಸೀಕ್ವೆನ್ಸೂ ಇಲ್ಲ. ಇದು ಕಸ್ತೂರಿ ಜಗನ್ನಾಥ್ ಅವರು ನಿರ್ದೇಶಿಸುತ್ತಿರುವ 'ದೇವಯಾನಿ' ಸಿನಿಮಾದ ಎಳೆ.

ಪರಕಾಯ ಪ್ರವೇಶದ ಕಥೆ ಇಟ್ಟುಕೊಂಡು ಈ ಸಿನಿಮಾವನ್ನು ಕಟ್ಟಿದ್ದಾರಂತೆ ನಿರ್ದೇಶಕರು. ಆತ್ಮಗಳ ಬಗ್ಗೆ ಆಸಕ್ತಿ ತಳೆದು ಅದರ ಕುರಿತೇ ಪಿಎಚ್. ಡಿ. ಮಾಡುವ ನಾಯಕನೇ ಕೊನೆಗೆ ಆತ್ಮವಾಗಿ ಇನ್ನೊಬ್ಬರ ಮೈಮೇಲೆ ಹೋಗುವಂಥ ತಿರುವೂ ಈ ಸಿನಿಮಾದಲ್ಲಿ ಇದೆಯಂತೆ. ಗೋಪಿಕೃಷ್ಣ ಈ ಚಿತ್ರದ ನಾಯಕನಾಗಿ ನಟಿಸಿದ್ದಾರೆ. ಅರ್ಚನಾ ಎಂಬ ಹುಡುಗಿ ದೇವಯಾನಿಯಾಗಿ ನಟಿಸಿದ್ದಾರೆ. ಎಂಎಲ್‌ಎ ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಶ್ರೀಮಂತರ ಮನೆ ಹುಡುಗಿಯ ಮೈಮೇಲೆ ಆತ್ಮದ ಸವಾರಿ ಯಾಕಾಗುತ್ತದೆ? ಅದರ ಪರಿಣಾಮಗಳೇನು ಎಂಬ ಪ್ರಶ್ನೆಗಳಿಗೆಲ್ಲ ಪಾತ್ರವೇ ಉತ್ತರ ನೀಡಲಿದೆ ಎನ್ನುವುದು ಅರ್ಚನಾ ಅಭಿಮತ. ಈ ಪಾತ್ರ ತನ್ನ ಬಣ್ಣದ ಬದುಕಿಗೆ ಹೊಸ ತಿರುವು ಕೊಡುತ್ತದೆ ಎಂಬ ನಂಬಿಕೆಯಲ್ಲಿ ಅರ್ಚನಾ ಇದ್ದಾರೆ. ಜೊತೆಗೆ ರಾಗ ಎಂಬ ಹುಡುಗಿಯೂ ಚಿತ್ರದ ಮುಖ್ಯ ಪಾತ್ರದಲ್ಲಿದ್ದಾರೆ. ಬೆಂಗಳೂರಿನ ಸುತ್ತಮುತ್ತಲಿನ ಜಾಗಗಳಲ್ಲಿ ಚಿತ್ರೀಕರಣ ನಡೆಸಿರುವ ಈ ಚಿತ್ರ ಈಗ ಬಿಡುಗಡೆಗೆ ಸಜ್ಜಾಗಿದೆ. ಮುಂದೆ ತೆಲುಗಿಗೆ ಡಬ್ ಮಾಡುವ ಉದ್ದೇಶವೂ ಚಿತ್ರತಂಡಕ್ಕಿದೆ. ಕುಮಾರ್ ಈಶ್ವರ್ ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ. ■



ಅರ್ಚನಾ



# ಗ್ಯಾಂಗ್‌ಸ್ಟರ್ ಗುಂಗಲ್ಲಿ ರಾಜ್!

'ಒಂದು ಮೊಟ್ಟೆಯ ಕಥೆ' ಸಿನಿಮಾದ ಬೋಳು ತಲೆಯ ಕನ್ನಡ ಪ್ರಾಧ್ಯಾಪಕನ ಪಾತ್ರದ ಮೂಲಕವೇ ಕನ್ನಡ ಸಿನಿಮಾ ಪ್ರೇಕ್ಷಕರಿಗೆ ಪರಿಚಿತರಾದವರು ರಾಜ್ ಶೆಟ್ಟಿ. ಮೊದಲ ಸಿನಿಮಾದಲ್ಲಿ ನಾಯಕನಾಗಿ ನಟಿಸುವುದರ ಜೊತೆಗೆ ನಿರ್ದೇಶನದ ಹೊಣೆಯನ್ನೂ ನಿಭಾಯಿಸಿದ ರಾಜ್ ನಂತರ ನಟನೆಯಲ್ಲಿಯೇ ಬ್ಯುಸಿಯಾಗಿಬಿಟ್ಟಿದ್ದರು. ಕಳೆದ ವರ್ಷವಿಡೀ ಏಳೆಂಟು ಸಿನಿಮಾಗಳಲ್ಲಿ ನಟಿಸಿರುವ ರಾಜ್ ಇದೀಗ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿದೆ ಎನ್ನುತ್ತಿದೆ ಗಾಂಧಿನಗರ ಮೂಲಗಳು.

ನಟನೆಯ ಜೊತೆಜೊತೆಗೇ ಬಿಡುವಾದಾಗಲೆಲ್ಲ ಅವರು ತಮ್ಮ ಹೊಸ ಚಿತ್ರ ಸ್ಕ್ರಿಪ್ಟ್ ಸಿದ್ಧಮಾಡಿಕೊಳ್ಳುತ್ತಿದ್ದರಂತೆ. ಹಾಗಾದರೆ ರಾಜ್ ಮತ್ತೊಂದು ಕಾಮಿಡಿ ಡ್ರಾಮಾದ ಜೊತೆಗೆ ತೆರೆಗೆ ಬರಲಿದ್ದಾರೆಯೇ? 'ನಮ್ಮ ಯಶಸ್ಸಿಗೆ ನಾವೇ ಮರುಳಾಗಬಾರದು. ಜನರು ಎಲ್ಲಿ ಚಪ್ಪಾಳೆ ಹೊಡೆಯುತ್ತಾರೆ, ವಿಶಲ್ ಹೊಡೆಯುತ್ತಾರೆ ಎಂಬುದನ್ನು ಯೋಚಿಸಿ ಕಥೆ ಹೆಣೆಯಲಾರಂಭಿಸಿದರೆ ಹಳೆಯ ಯಶಸ್ಸನ್ನೇ ನಕಲು ಮಾಡಲು ಹೋಗುತ್ತೇವೆ. ಅದು ನನಗಿಷ್ಟವಿಲ್ಲ. ಮೊದಲ ಸಿನಿಮಾಗಿಂತ ತುಂಬ ಭಿನ್ನವಾದ ರೀತಿಯಲ್ಲಿ ಮುಂದಿನ ಸಿನಿಮಾ ಮಾಡಬೇಕು ಎನ್ನುವುದು ನನ್ನ ಆಸೆ' ಎಂದು ಅವರೊಂದು ಸಂದರ್ಶನದಲ್ಲಿ ಹೇಳಿಕೊಂಡಿದ್ದರು. ಇದಕ್ಕೆ ಪೂರಕವಾಗಿಯೇ ಕಾಮಿಡಿ ಜಾನರ್ ಅನ್ನು ಪೂರ್ತಿಯಾಗಿ ಬಿಟ್ಟು ಗ್ಯಾಂಗ್‌ಸ್ಟರ್ ಕಥೆಯೊಂದನ್ನು ಅವರು ಕೈಗೆತ್ತಿಕೊಂಡಿದ್ದಾರಂತೆ. ಒಂದು ಮೂಲದ ಪ್ರಕಾರ ಸ್ಕ್ರಿಪ್ಟ್ ಮುಗಿದು, ಬಹುತೇಕ ಕಲಾವಿದರ ಆಯ್ಕೆಯೂ ಮುಗಿದು ಚಿತ್ರೀಕರಣದ ಹಂತದಲ್ಲಿ ಇದ್ದಾರೆ. ಹಾಗಂತ ಅವಸರವಸರವಾಗಿ ಚಿತ್ರ ಮಾಡಿ ಮುಗಿಸುವುದು ಅವರ ಉದ್ದೇಶ ಅಲ್ಲ. ಚಿತ್ರದ ಬಜೆಟ್ ಕೂಡ ದೊಡ್ಡದಿರುವ ಕಾರಣ ಹಂತಹಂತವಾಗಿ ಚಿತ್ರೀಕರಣ ಮುಗಿಸಿ ಒಂದು ಗುಣಮಟ್ಟದ ಚಿತ್ರ ರೂಪಿಸುವ ಯೋಜನೆಯನ್ನು ಅವರು ಹಾಕಿಕೊಂಡಿದ್ದಾರಂತೆ.

'ಮೊಟ್ಟೆ ಕಥೆ'ಯ ನಿರ್ದೇಶಕ ಎಲ್ಲಿಹೋದರು ಎಂದು ಅರಸುತ್ತಿದ್ದವರಿಗೆ ಅಚ್ಚರಿ ಹುಟ್ಟಿಸುವಂಥ ಕಥೆಯೊಂದಿಗೆ ಮರಳಲು ರಾಜ್ ಸಜ್ಜಾಗಿದ್ದಾರೆ. ಆದರೆ ಆ ಅಚ್ಚರಿಯನ್ನು ಅನುಭವಿಸಲು ಇನ್ನಷ್ಟು ದಿನಗಳಂತೂ ಕಾಯಲೇ ಬೇಕು. ■